ನಾನಾ ರೀತಿಯ ಅನುಮಾನಗಳು ಬರುವುದಿಲ್ಲವೇ? ಆದರೆ ಯುವಕ ಆ ನಿಷ್ಕಳಂಕ ಮುಖದಲ್ಲಿ ತಲ್ಲೀನನಾಗಿ ಹೋಗಿದ್ದ. ಅವನು ಮೈಮರೆತು ನೋಡುತ್ತಲೇ ಇದ್ದ. ಒಮ್ಮೆಲೇ ಎಚ್ಚೆತ್ತವನಂತೆ 'ನೀವು ಯಾರು? ಒಬ್ಬರೇ ಬಂದಿರಾ? ನಿಮ್ಮವರಾರೂ ಇಲ್ಲವೇ?' ಎಂದು ತಡವರಿಸುತ್ತ ಕೇಳಿದ. ತುಸು ಮುಖ ಮೇಲಿತ್ತಿ ಓರೆ ನೋಟದಿಂದ ನೋಡುತ್ತ 'ಇನ್ನೇನು ಬರುತ್ತಾರೆ' ಎಂದು ನಕ್ಕಳು. ಆ ನಗು ಅವಳ ಮನೋಹರತೆಯನ್ನು ಹೆಚ್ಚಿಸಿತು. ನಂತರ ಅವರಿಬ್ಬರು ಪಿಸುಮಾತುಗಳಲ್ಲಿ ಮೈಮರೆತಂತೆ ಕಂಡಿತು. ಯುವಕ ಹೆಚ್ಚು ಉಲ್ಲಾಸ ಭರಿತನಾದಂತೆ ಕಂಡ. ಮನೆಯನ್ನು ಬಿಟ್ಟು ಕಾಣದ ಊರಿಗೆ ಬಂದವನಿಗೆ ಇಷ್ಟು ಬೇಗ ಆಸೆ ಫಲಿಸಿತೇ? ಹಾರಿ ಕುಣಿದಾಡಿ ಅಪ್ಪ, ಅಮ್ಮನಿಗೆ ಇಲ್ಲಿಂದಲೇ ಕೂಗಿ ಹೇಳಿ ಬಿಡುವಷ್ಟು ಹುಮ್ಮಸ್ಸು ಅವನಲ್ಲಿ ಕಾಣುತ್ತಿತ್ತು ನನ್ನ ಹುಡುಗಿ ಸಿಕ್ಕಿದ್ದಾಳೆ ಎಂದು. ಕೆಲ ನಿಮಿಷಗಳ ನಂತರ ಅವನು ಕೇಳಿಯೇ ಬಿಟ್ಟ; 'ನಿಮಗೆ ನನ್ನನ್ನು ಮದುವೆಯಾಗಲು ಇಷ್ಟವೇ?' ಹುಡುಗಿ ನಾಚುತ್ತ 'ಹೂಂ' ಎಂದಳು.



'ನನಗೂ ಒಳ್ಳೆಯ ಗಂಡ ಬೇಕು!' ಎಂದು ಮಾತು ಸೇರಿಸಿದಳು. ನಾನು ಸನಿಹದಲ್ಲೇ ಇದ್ದುದರಿಂದ ಅವರ ಮಾತುಗಳು ಕೇಳುತ್ತಿದ್ದವು.

ಪರವಾಗಿಲ್ಲ ಇಷ್ಟೊಂದು ಬೋಲ್ಡ್ ಆಗಿ ಮಾತಾಡಿದ್ರಲ್ಲ ಎಂದೇನೋ ಅವನಾಗಲೇ ಮೆಚ್ಚುಗೆ ಸೂಸುತ್ತಿದ್ದ. ಅವನು ಅಲ್ಲಿಂದಲೇ ನನ್ನ ಕಡೆ ನೋಡಿ ವಿಜಯ ಸೂಚಕವೆನ್ನುವಂತೆ ಬೆರಳೆತ್ತಿ ತೋರಿದ. ನಾನೂ ನಕ್ಕು ಪ್ರತಿಕ್ರಿಯೆ ಸೂಚಿಸಿ ಒಳ್ಳೆಯದಾಗಲಿ ಎಂದು ಹಾರೈಸಿ ಪ್ರತಿ ಸಂಕೇತ ತೋರಿದೆ.

ಅವರಿಬ್ಬರನ್ನೂ ಅವರ ಲೋಕಕ್ಕೆ ಬಿಟ್ಟು ನಾನು ಸುತ್ತಮುತ್ತ ಕಣ್ಣಾಡಿಸಿದೆ. ಬಿಸಿಲು ಹೆಚ್ಚಾಗುತ್ತಿದೆ ಅನಿಸಿತು. ನಾನು ಕುಳಿತಿದ್ದ ಜಾಗದಲ್ಲಿ ತಣ್ಣನೆಯ ಗಾಳಿ ಕಡಿಮೆಯಾಗಿ ಮರದ ಸಂದಿಗಳಿಂದಲೇ ಸೂರ್ಯ ತೂರಿ ತನ್ನ ಪ್ರಖರ ಕಿರಣಗಳಿಂದ ಸುಡುತ್ತಿದ್ದ. ಆದರೆ ಅಲ್ಲಿ ಏನಾಗಬಹುದು ಮುಂದೆ ಎನ್ನುವ ಕುತೂಹಲ ನನ್ನನ್ನು ಅಲ್ಲಿಯೇ ಹಿಡಿದಿಟ್ಟಿತು. ಜೋಡಿಯ ಕಡೆ ಕಣ್ಣು ಹೊರಳಿಸಿದೆ. ಅವರೀಗ ಯಾವ ಮಾತುಗಳನ್ನೂ ಆಡದೆ ಕಣ್ಣುಗಳಲ್ಲೇ ಮೌನ ಸಂಭಾಷಣೆ ನಡೆಸಿದ್ದರು. ಆ ಕ್ಷಣದಲ್ಲಿ ಬರಲಿರುವ ಗೆಳೆಯನನ್ನೂ ಅವನು ಖಂಡಿತ ಮರೆತಿರುತ್ತಾನೆ ಎಂದೆನಿಸಿತು! ಸೂರ್ಯನ ಕಿರಣಗಳ ಪ್ರಖರತೆಗೆ ನನ್ನ ಮುಖದಲ್ಲಿ ಬೆವರಾಡಿತು. ಇದೇನಿದು! ಇಷ್ಟೊಂದು ಬಿಸಿ! ಆ ತಂಗಾಳಿ ಎಲ್ಲಿ ಹೋಯಿತು? ಆ ಬಿಸಿಲು ಇಡೀ ವಾತಾವರಣವನ್ನೇ ಆಹುತಿ ತೆಗೆದು ಕೊಳ್ಳುವುದೇನೋ ಎಂಬ ಆತಂಕ ನನ್ನಾನ್ನಾವರಿಸಿತು.

ಮತ್ತೆ ಐದು ನಿಮಿಷ ಕಳೆದಿರಬಹುದು. ನೋಡಿದರೆ ಮೂರ್ನಾಲ್ಕು ಜನ ಇತ್ತಲೇ ಧಾವಿಸಿ ಬರುತ್ತಿದ್ದಾರೆ. ಅವರೊಳಗೆ ಒಬ್ಬ ಹೆಂಗಸು ಇದ್ದಳು. ಯಾರಿವರು? ಎಂದುಕೊಳ್ಳುತ್ತಿದ್ದಂತೆಯೇ ಅವರು ಆ ಜೋಡಿಯನ್ನು ಸುತ್ತುವರಿದಿದ್ದರು. ಓಡಿ ಬಂದವರೇ 'ಇಲ್ಲವಳೆ ಬನ್ರೋ. . . ಹಿಡ್ಕೊಳ್ಳಮ್ಮ ಅವಳನ್ನ. . ತಪ್ಪಿಸಿಕೊಂಡು ಹೋಗುತ್ತಾಳೆ.. ಎಲ್ಲೆಲ್ಲಿ ಹುಡುಕೋದು ಈ ಸುಂದರೀನ. . . ಸಾಕಾಯ್ತು. ಹಿಡ್ಕೊಳಿ. . .ಬೇಗ. . ' ಎಂದು ಕೂಗಿದ ಒಬ್ಬ. ಆ ಯುವಕ ಅಪ್ರತಿಭನಾದ. 'ಯಾರ್ರೀ ನೀವೆಲ್ಲಾ. . ಅವರನ್ನ ಯಾಕ್ರೀ. . . ಹಿಡ್ಕೊತೀರಾ' ಎಂದು ಅವಳನ್ನು ರಕ್ಷಿಸುವಂತೆ ಮೇಲೆದ್ದ. ನಾನು ಬೆರಗು, ಆತಂಕಗಳಿಂದ ನೋಡುತ್ತಿದ್ದೆ. ಒಂದು ಕ್ಷಣ ಏನಾಗುತ್ತಿದೆ ಎಂದು ಅರ್ಥ ಮಾಡಿಕೊಳ್ಳಲೂ ಕಷ್ಟವಾಯಿತು. ಆ ಹುಡುಗಿ ಗಾಬರಿಯಾಗಿ ಯುವಕನನ್ನು ತಬ್ಬಿಕೊಂಡು 'ದಯಮಾಡಿ ಅವರ ಜೊತೆ ಕಳುಹಿಸಬೇಡಿ ಪ್ಲೀಸ್. . .ಪ್ಲೀಸ್' ಎಂದು ಅಳತೊಡಗಿದಳು.

ನವಜೀವನದ ಕನಸುಗಳನ್ನು ಹೆಣೆಯುತ್ತಿದ್ದ ಈ ಜೋಡಿಯ ಮಧ್ಯೆ ಇದ್ದಕ್ಕಿದ್ದ ಹಾಗೆ ಈ ಅಪಶೃತಿ! ನಾನು ತಡೆಯಲಾರದೆ ಕೂಗಿದೆ 'ಏಯ್. . .ಯಾರಪ್ಪ ನೀವೆಲ್ಲಾ ಆ ಹುಡುಗಿ ನಿಮಗೇನು ಮಾಡಿದಳು?' ಎಂದೆ. ಅವರಲ್ಲಿ ಒಬ್ಬ 'ಇವಳು ಹುಚ್ಚಿ ನಾವು ಹುಚ್ಚಾಸ್ಪತ್ರೆಯೋರು, ವಾರ್ಡ್ ಬಾಯ್‌ಗಳು, ಯಾವ ಹುಡುಗನನ್ನು ನೋಡಿದ್ರೂ ಸರಿ, ಓಡಿ ಬಂದು ಬಿಡುತ್ತಾಳೆ. ದಿನವೆಲ್ಲಾ ಒಳ್ಳೇ ಗಂಡ ಬೇಕು ಅಂತ ಕೂಗಿಕೊಂಡು ಓಡಾಡ್ತ ಎಲ್ಲರಿಗೂ ತೊಂದ್ರೆ ಕೊಡ್ತಾಳೆ'. ಆಗ ನಾನು ಹೌದಲ್ಲ, ಇವರು ಆಸ್ಪತ್ರೆ ವಾರ್ಡ್ ಬಾಯ್‌ಗಳು ಅಂತಾರೆ. ಯೂನಿಫಾರಂ ಇಲ್ಲ. ಕಳ್ಳರು ಸುಳ್ಳು ಹೇಳುತ್ತಿದ್ದಾರೆ ಎಂದೇ ಭಾವಿಸಿದೆ. ಸುಮ್ಮನಿರಲಾಗಲಿಲ್ಲ. ಅವರು ಅವಳನ್ನು ಹುಚ್ಚಿ ಎಂದ ಮಾತನ್ನು ನನಗೆ ಜೀರ್ಣಿಸಿಕೊಳ್ಳಲಾಗಲಿಲ್ಲ. ಯುವಕ ಮರಗಟ್ಟಿದಂತೆ ಸುಮ್ಮನೆ ನಿಂತುಬಿಟ್ಟ. ನಾನು 'ಆಸ್ಪತ್ರೆ ವಾರ್ಡ್ ಬಾಯ್‌ಗಳು, ಅಂತೀರಿ. ನಿಮ್ಮೆಲ್ಲರ ಯೂನಿಫಾರಂ ಎಲ್ಲಿ? ಸುಳ್ಳು ಹೇಳಿ ಹುಡುಗಿಯನ್ನು ಹೊಡೆದುಕೊಂಡು ಹೋಗಲು ನೋಡುತ್ತಿದ್ದೀರಾ? ಅಲ್ಲಯ್ಯ, ಹುಚ್ಚಿ ಅಂತೀರಾ! ಹುಚ್ಚಿ ಹೀಗೆ ಅಲಂಕರಿಸಿಕೊಂಡು ಬರೋಕೆ ಸಾಧ್ಯವೆ? ಅದೂ ಆಸ್ಪತ್ರೆಯಿಂದ! ಪೊಲೀಸ್‌ಗೆ ಕಂಪ್ಲೈಂಟ್ ಕೊಡಬೇಕಾ?' ಎಂದು ಧೈರ್ಯ ತಂದುಕೊಂಡು ಬೆದರಿಸಿದೆ.

ಅವರಲ್ಲಿ ಸ್ವಲ್ಪ ಹಿರಿಯ ಸಂಭಾವಿತನ ಹಾಗೆ ಕಾಣುತ್ತಿದ್ದವನು 'ನೀವೆಲ್ಲಾ ಸುಮ್ಮನಿರ್ರೋ ಸ್ವಲ್ಪ' ಅಂತ ಗದರಿ, ಜೇಬಿನಿಂದ ಗುರುತಿನ ಚೀಟಿ ತೆಗೆದು ನನಗೆ ತೋರಿಸುತ್ತಿದ್ದಂತೆಯೇ, ಇನ್ನೊಬ್ಬ ಕೋಪದಿಂದ ಕೂಗಿದ, 'ಯೂನಿಫಾರಂ ಹಾಕ್ಕೊಂಡು ಬಂದ್ರೆ ಇವಳೆಲ್ಲಿ ಕೈಗೆ ಸಿಕ್ತಾಳೆ. ದೂರದಿಂದ್ಲೇ ನೋಡಿ ಓಡಿ ಹೋಗ್ತಾಳೆ. ಓಡೋದ್ರಲ್ಲಿ ಪಿ.ಟಿ.ಉಷಾನ್ನು ಮೀರಿಸುತ್ತಾಳೆ. ಅದಕ್ಕೇ ಹೀಗೆ ಬಂದದ್ದು'. ಆ ಹಿರಿಯ ಅವನ ಕಡೆ ತಿರುಗಿ ಸ್ವಲ್ಪ ಸುಮ್ಮನಿರುವುದನ್ನು ಮೊದಲು ಕಲಿತುಕೊಳ್ಳೋ ಎಂದು ನನ್ನ ಕಡೆ ತಿರುಗಿ 'ಹೌದು ಮೇಡಂ, ಯೂನಿಫಾರಂ ಇಲ್ದೆ ಇರೋದರಿಂದ ನಿಮಗೆ ಅನುಮಾನ ಬಂದಿರೋದು ಸಹಜವೇ! ಇವಳಿಗೆ ಆಸ್ಪತ್ರೆಯಲ್ಲಿ ಒಬ್ಬ ತಾಯಿ ಸಿಕ್ಕಿಬಿಟ್ಟಿದ್ದಾಳೆ. ಅವ್ಳು ಇವಳ ಹಿಂದೆ ಸದಾ ಮಗಳೇ ಮಗಳೇ ಅಂತ ಸುತ್ತುತ್ತಾ ಇರ್ತಾಳೆ. ಅವಳೇ ಇವಳಿಗೆ ಅಲಂಕಾರ ಮಾಡಿ ಕಳುಹಿಸುವುದು. ಇವ್ಳು ಹೀಗೆ ತಪ್ಪಿಸಿಕೊಂಡು ಬರುತ್ತಿರುವುದು ಇದು ಒಂಬತ್ತನೇ ಸಲ. ಬಿಟ್ರೆ ಸಾಕು ಓಡಿ ಬಿಡ್ತಾಳೆ. ಕೈಗೇ ಸಿಕ್ಕಲ್ಲ. . . ಸಾಕಾಗಿದೆ ಹುಡುಕೀ, ಅಲೆದಾಡಿ'.

'ಆಯ್ತಮ್ಮ, ಬಿಗಿಯಾಗಿ ಹಿಡ್ಕೊಳಮ್ಮ' ಎಂದು ಹೇಳಿ ಉಳಿದವರ ಕಡೆ ನೋಡಿ 'ನಡೀರಯ್ಯ' ಎಂದ. ನಾನು ಒಂದು ನಿಮಿಷ ತಡೀರಿ, ಹುಡುಗಿಗೆ ಮದುವೆಯಾಗಿದೆಯೇ? ಎಂದೆ. ಅದಕ್ಕೆ ಆತ ಗಂಡನೇ ತಂದು ಆಸ್ಪತ್ರೆಗೆ ಸೇರಿಸಿದ್ದು. ಸೇರಿಸಿ ಹೋದವನು ತಿರುಗಿಯೂ ನೋಡಿಲ್ಲ ಎಂದವನು ಬರ್ತೀವಿ ಮೇಡಂ ಎನ್ನುತ ಹೊರಟರು. ಆ ಹೆಣ್ಣು 'ಬಿಡಿ.. ಬಿಡಿ..' ಎಂದು ಒದರಾಡುತ್ತಿದ್ದರೂ ಬಿಡದೆ ಆಯಮ್ಮ ಬಿಗಿಯಾಗಿ ಹಿಡಿದು ಎಳೆದೊಯ್ದಳು.

ಹುಡುಗ ಬೆಪ್ಪಾಗಿ ಬೆಂಚಿನ ಮೇಲೆ ಕುಳಿತ. ಅಯ್ಯೋ ನನ್ನ ವಿಧಿಯೇ! ಎಂದು ಪರಿತಪಿಸುವಂತಾಗಿತ್ತು. ಮರುಕ್ಷಣದಲ್ಲೇ ಬಿಡುಗಡೆಯ ನಿಟ್ಟುಸಿರು ಬಿಡುತ್ತಾ 'ಸದ್ಯ ಹುಚ್ಚಿಯಂತೆ! ಅಬ್ಬ, ದೇವರೇ ತಪ್ಪಿಸಿದ, ಬಚಾವಾದೆ..' ಎಂದ ನಗುತ್ತಾ. ಆ ನಗು ನಿರಾಳವಾಗಿತ್ತು. ಅದರಲ್ಲಿ ನೆಮ್ಮದಿಯಿತ್ತು! ಆದರೆ ನಾನು ನಗಲಿಲ್ಲ! ಅಂತಹ ಹುಡುಗಿಯನ್ನು ಹುಚ್ಚಿಯಾಗಿ ಮಾಡಿದ ಈ ಸಮಾಜದ ಬಗ್ಗೆ ಮನಸ್ಸು ಚಿಂತಿಸಲಾರಂಭಿಸಿತ್ತು. ಅಷ್ಟೊತ್ತಿಗೆ ಆ ಯುವಕ ಎದುರು ನೋಡುತ್ತಿದ್ದ ಗೆಳೆಯ ಬಂದ. 'ಎಷ್ಟು ಹೊತ್ತು ಮಾಡಿಬಿಟ್ಟೆ ಮಹಾರಾಯ ಬಾ. ಇನ್ನೂ ತಡವಾಗಿದ್ದರೆ ನಾನೂ ಹುಚ್ಚಾಸ್ಪತ್ರೆ ಸೇರಬೇಕಾಗ್ತಿತ್ತು' ಎಂದ. ಅವನ ಗೆಳೆಯ 'ಸಾರಿ ಕಣೋ. . . ಟ್ರಾಫಿಕ್ ಜಾಮ್. . . ಇವತ್ತು ಅಲ್ಲೊಂದು ಮೆರವಣಿಗೆ ಅಡ್ಡ ಬಂದು. . . ತುಂಬ ಜನ. . .ಬಿಡು! ಏನೋ ಆಯ್ತು. ನಡೀ ಮನೆಗೆ ಹೋಗೋಣ' ಎಂದು ಗೆಳೆಯನ ಲಗೇಜಿಗೆ ಕೈ ಹಾಕಿದ. ಮೇಡಂ ಕಡೆ ತಿರುಗಿ ಆ ಯುವಕ ಗೆಳೆಯನನ್ನು ಪರಿಚಯ ಮಾಡಿಕೊಟ್ಟ. ಇವರು ಕೊಟ್ಟ ನೀರು, ಬಾಳೆಹಣ್ಣು ನನ್ನ ಜೀವವುಳಿಸಿತು ಮಾರಾಯ! ಎಂದ. ನನ್ನ ಮನಸು ಒಳಗೇ ಪಿಸುಗುಟ್ಟಿತು ನೀನು ಮನಸ್ಸು ಮಾಡಿದ್ದರೆ ಆ ಹುಡುಗಿಗೆ ಹೊಸ ಜೀವನವನ್ನೇ ಕೊಡಬಹುದಿತ್ತು. ಮುಡಿಯಿಂದ ಜಾರಿದ ಹೂವಿಗೆ ಒಂದು ನೆಲೆ ಸಿಗುತ್ತಿತ್ತು ಮೂರ್ಖ..

ಅವರಿಬ್ಬರೂ ಅಲ್ಲಿಂದ ನನಗೆ ಬೈ ಹೇಳಿ ಹೊರಟು ಹೋದರು. ನಾನು ಭಾರವಾದ ಹೆಜ್ಜೆಗಳನ್ನಿಡುತ್ತ ಮನೆಯ ಕಡೆ ನಡೆದೆ. ಆ ಹೆಣ್ಣಿನ ಅಮಾಯಕ ಮುಖ ನೆನೆಸಿಕೊಂಡು ವಿಷಾದದ ಹನಿಗಳೆರಡು ಕಣ್ಣಿನಿಂದ ಜಾರಿದವು.